ಎಂ.ವಿ.ಸಿ. 597/2023,  ಆರ್.ಡಬ್ಲ್ಯೂ.2  ಹೆಸರುಃ ಮಂಜುನಾಥ

**ದಿಃ17-06-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಜಿ.ಎಂ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಕೆ.ಎ.17/ಎನ್.4594 ರ ವಾಹನದ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಎಸ್.ಎಸ್. ವಕೀಲರಿಂದ**

2. ಅಪಘಾತದ ಸಮಯದಲ್ಲಿ ಕೆ.ಎ.17-ಎನ್.-4594 ರ ವಾಹನಕ್ಕೆ ವಿಮಾ ಪಾಲಿಸಿ ಇತ್ತು ಎಂದರೆ ಸಾಕ್ಷಿ 3 ನೇ ಪಕ್ಷಗಾರರಿಗೆ ಸಂಬಂಧಿಸಿದಂತೆ ಮಾತ್ರ ಇತ್ತು ಎಂದು ಹೇಳುತ್ತಾರೆ. ನಿ.ಆರ್.1 ರ ವಿಮಾ ಪಾಲಿಸಿಯಂತೆ ವಾಹನದಲ್ಲಿ ಚಲಿಸುವ ಪ್ರಯಾಣಿಕರಿಗೆ ಸಂಬಂಧಿಸಿದಂತೆ ರೂ.350/- ವಿಮಾ ಮೊತ್ತವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿ. ಹಾಗಾಗಿ 2 ನೇ ಎದುರುದಾರರು ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಕೆ.ಇ.ಸಿ. ವಕೀಲರಿಂದ**

3. 3 ನೇ ಪಕ್ಷಗಾರರಿಗೆ ಸಂಬಂಧಿಸಿದ ಹೊಣೆಗಾರಿಕೆ ವಾಹನದ ಹೊರಗಡೆ ಇರುವಂತಹ ವ್ಯಕ್ತಿಗೆ ಅನ್ವಯಿಸುತ್ತದೆ. ವಾಹನದ ಹೊರಗೆ ಇರುವಂತಹ ವಿಮಾ ಪಾಲಿಸಿಗೆ ಆಕ್ಟ್ ಪಾಲಿಸಿ ಎಂದು ಹೇಳಲಾಗುತ್ತದೆ ಎಂದರೆ ಸರಿ. ನಿ.ಆರ್.1 ಮತ್ತು 2 ರ ವಿಮಾ ಪಾಲಿಸಿಗಳು ಆಕ್ಟ್ ಪಾಲಿಸಿಗಳು ಅಲ್ಲ ಎಂದರೆ ಸರಿ. ಓ.ಡಿ. ಸೌಲಭ್ಯದ ಅಡಿಯಲ್ಲಿ ವಾಹನದ ಜಖಂಗಳಿಗೆ ಸಂಬಂಧಿಸಿದಂತೆ ವಿಮಾ ಮೊತ್ತವನ್ನು ಕಟ್ಟಿಸಿಕೊಳ್ಳುತ್ತೇವೆ ಎಂದರೆ ಸರಿ. 3 ನೇ ಪಕ್ಷಗಾರರಿಗೆ ಸಂಬಂಧಿಸಿದಂತೆ ಚಾಲಕ, ಮಾಲೀಕ ಮತ್ತು ಪ್ರಯಾಣಿಕರಿಗೆ ವಿಮೆ ಅನ್ವಯವಾಗುತ್ತದೆ ಎಂದರೆ ಸರಿ. ನಿ.ಆರ್.2 ರಂತೆ ಚಾಲಕನಿಗೆ, ಪ್ರಯಾಣಿಕರಿಗೆ ಮತ್ತು 3 ನೇ ಪಕ್ಷಗಾರರಿಗೆ ಸಂಬಂಧಿಸಿದಂತೆ ಪಡೆದಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಂಬಂಧಿಸಿದಂತೆ ರೂ.1,00,000/- ಪರಿಹಾರ ಮೊತ್ತದ ಕುರಿತು ಮಾತ್ರ ವಿಮಾ ಕಂತಿನ ಮೊತ್ತವನ್ನು ಪಡೆದಿದ್ದೇವೆ ಎಂದು ಹೇಳುತ್ತಾರೆ. ಹೆಚ್ಚುವರಿಯಾಗಿ ಪಾವತಿಸಿರುವಂತಹ ವಿಮಾ ಕಂತಿನ ಮೊತ್ತವನ್ನು ವಾಹನದ ಮಾಲೀಕರು ಆಯ್ಕೆಯಾಗಿ ಪಾವತಿಸಿದ್ದು, ಹಾಗಾಗಿ ಅಷ್ಟು ಮೊತ್ತಕ್ಕೆ ಮಾತ್ರ ನಾವು ವಿಮಾ ಕಂತನ್ನು ಪಡೆದಿದ್ದೇವೆ. ಪರಿಹಾರವನ್ನು ಪಾವತಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರೆ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : 4 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ